ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಜಿ.ವಿ.ಕೆ. ರಾವ್ ವರದಿ ಪ್ರಕಾರ ಸಹಕಾರಸಂಘಗಳು ಎಷ್ಟಿವೆ? 33ಗೃಹನಿರ್ಮಾಣ ಸಹಕಾರಸಂಘಗಳಿಗೆ ಕೊಟ್ಟು ಉಳಿದಿರುವ ಸಹಕಾರಸಂಘಗಳಿಗೆ ಭೂಮಿಯನ್ನು ಹಸ್ತಾಂತರ ಮಾಡುವುದಕ್ಕೆ ಇರತಕ್ಕ ಅಡ್ಡಿಯೇನು? ಜಿ.ವಿ.ಕೆ. ರಾವ್ ವರದಿ ಬಂದು ಎಷ್ಟು ವರ್ಷಗಳಾಗಿವೆ ಬೆಂಗಳೂರಿನಲ್ಲಿ ಸೈಟಿನ ಬೆಲೆ ಜಾಸ್ತಿಯಾಗಲಿಲ್ಲವೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಗೃಹನಿರ್ಮಾಣ ಸಹಕಾರಸಂಘಗಳು 418 ಇವೆ. ಅವುಗಳಲ್ಲಿ ಎಲ್ಲೆಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಜಮೀನು ಸಿಕ್ಕಿದೆ ಆ ವಿವರವನ್ನು ಕೊಡಬಹುದು. ಆದರೆ ಈ ಗೃಹನಿರ್ಮಾಣ ಸಹಕಾರಸಂಘಗಳ ಬಗ್ಗೆ ಕ್ರಮ ಕೈಗೊಂಡು 2097.19 ಎಕರೆ ವಿಸ್ತೀರ್ಣ ಜಮೀನನ್ನು ಇಲ್ಲಿಯವರೆಗೆ ಹಸ್ತಾಂತರಿಸಲಾಗಿದೆ. ಉಳಿದ ಸಹಕಾರ ಸಂಘಗಳ ವಿಷಯದಲ್ಲಿ ಪರಿಶೀಲನೆ ಮಾಡಿ ವಿವರವಾದ ಒಂದು ವರದಿಯನ್ನು ಕೊಡಬೇಕಾಗಿದೆ. ಆ ವರದಿಯನ್ನು ತೆಗೆದುಕೊಂಡು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ವಿಪ್ರಾಡು ಮಾಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಬರಲಿಲ್ಲ. 33 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ 2097-19 ಎಕರೆ ಜಮೀನು ಕೊಟ್ಟಿದ್ದಾರೆ. ಇನ್ನು ಎಷ್ಟು ಸಹಕಾರಸಂಘಗಳು ಇವೆ? ಎಷ್ಟು ಭೂಮಿಯನ್ನು ಕೊಡಬೇಕು? ಜಿ.ವಿ.ಕೆ. ರಾವ್‌ರವರ ವರದಿ ಬಂದು ಎಷ್ಟು ಕಾಲವಾಯಿತು?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣವಾದ ವಿವರ ನನ್ನ ಹತ್ತಿರ ಇಲ್ಲ. ಇದಕ್ಕೆ ಬೇಕಾದಂಥ ವಿವರಗಳನ್ನು ಒದಗಿಸಲು ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಒದಗಿಸಿ ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ.

ಸಿ.ಸಿ.ಐ.ರವರಿಂದ ರಾಜ್ಯದಲ್ಲಿ ಹತ್ತಿಯ ಖರೀದಿ

301 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಿ.ಸಿ.ಐ.ರವರು 1993-94ನೇ ಸಾಲಿನಲ್ಲಿ ಯಾವ ಯಾವ ಎ.ಪಿ.ಎಂ.ಸಿ.ಯಲ್ಲಿ ಎಷ್ಟೆಷ್ಟು ಹತ್ತಿಯನ್ನು ಖರೀದಿ ಮಾಡಿರುವರು?

ಆ) ಸಿ.ಸಿ.ಐ.ರವರು ಕರ್ನಾಟಕದಲ್ಲಿ ಅತಿ ಕಡಿಮೆ ಹತ್ತಿಯನ್ನು ಖರೀದಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹೆಚ್ಚಿನ ಹತ್ತಿಯನ್ನು ಖರೀದಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಎಪಿಎಂಸಿ ಗಳಲ್ಲಿ ಎಷ್ಟು ಹತ್ತಿ ಬಂದಿತ್ತು ಹಾಗೂ ಎಷ್ಟು ಹತ್ತಿ ಖರೀದಿ ಮಾಡಲಾಗಿದೆ?

ಉ) ಸಿಸಿಐನವರು ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಹೆಚ್ಚಿಗೆ ಹತ್ತಿಯನ್ನು ಖರೀದಿ ಮಾಡದೆ ಇರುವುದರಿಂದ ರೈತರಿಗೆ ತುಂಬಾ ಹಾನಿಯಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ 1994-95ನೇ ಸಾಲಿನಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಮಾರುಕಟ್ಟೆಗಳಲ್ಲಿ ಹೆಚ್ಚಿಗೆ ಹತ್ತಿಯನ್ನು ಖರೀದಿಸುವ ಬಗ್ಗೆ ಸರ್ಕಾರದವರು ಪ್ರಯತ್ನಿಸುವರೆ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ತಃಖ್ತೆ ಲಗತ್ತಿಸಿದೆ

ಆ) ಬಂದಿದೆ.

ಇ) ಹತ್ತಿಯ ದಾರಣೆಯು ಬೆಂಬಲ ಬೆಲೆಗಿಂತ ಕಡಿಮೆಯಾದಲ್ಲಿ ಮಾತ್ರ ಸಿಸಿಐನವರನ್ನು ಖರೀದಿಸಲು ಕೋರಲಾಗುತ್ತದೆ.

ಈ) 1993-94ನೇ ಸಾಲಿನಲ್ಲಿ ಬಂದ ಮತ್ತು ಖರೀದಿಸಿದ ಹತ್ತಿಯ ಪ್ರಮಾಣ:

	ಬಂದದ್ದು (ಕ್ವಿಂಟಾಲ್‌ನಲ್ಲಿ)	ಸಿಸಿಐನವರು ಖರೀದಿಸಿದ್ದು (ಕ್ವಿಂಟಾಲಿನಲ್ಲಿ)	ಶೇಕಡಾವಾರು
ಬೈಲಹೊಂಗಲ	3,23,735	35,181	10.87
ಸವದತ್ತಿ	3,12,465	14,259	4.56

ಉ) ಹಾನಿಯಾಗಿರುವುದಿಲ್ಲ

ಊ) ಪ್ರಯತ್ನ ಪಡಲಾಗುವುದು

The Cotton Corporation of India Ltd., Bangalore - 27

Statement showing the position of Centrewise, Qualitywise Purchases of Kapas by CCI in Karnataka during 1993-94 Season

Quality	Centre	CCI purchases during 1993-94 Qty.of Kapas purchased in Quintals	Highesh rate paid per Quintal	Lowest rate paid per Quintal
DCHE32	Arasikere	6,316	1875	1575
	Bijapur	2,775	2100	2001
	Bailhongal	35,181	2350	1700
	Chitradurga	9,935	2185	2147
	Davanagere	6,164	1916	1656
	Dharwad	10,506	2251	2100
	Gokak	11,697	2150	1865
	Hubli	1,061	1912	1601
	Nargund	794	2071	1865
	Ranebennur	7,990	2042	1801
	Saundatti	14,259	2301	1801
	Raichur	524	1853	1790
	Bellary	3,201	2135	1735
	Kottur	5,383	2301	1401
	Total	**1,15,786**	**Qtls.**	

Varalaxmi	Bijapur	1,719	1875	1801
	Total	**1,719 Qtls.**		
170 CO-2	Gokak	2,642	1501	1250
	Total :	**2,642 Qtls.**		
LRA	Raichur	1,219	1300	1100
	Total :	**1,219 Qtls.**		
H-6	Raichur	4,630	1800	1550
	Bellary	2,488	1685	1450
	Sindhanur	4,674	1725	1476
	Karatagi	905	1770	1661
	Total :	**12,697 Qtls.**		
MCU-5	Raichur	1,944	1990	1520
	Bellary	3,027	1805	1745
	Sindhanur	613	1865	1671
	Total :	**5,584 Qtls.**		
	Total Purchases	**1,39,647 Quintals.**		

ಶ್ರೀ ಶಿವಾನಂದ ಎಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಕಳಿಸಿರುವ ಉತ್ತರದ ಪ್ರಕಾರ ಸಿ.ಸಿ.ಐ.ನವರು ನಮ್ಮ ರಾಜ್ಯದಲ್ಲಿ ಹತ್ತಿಯನ್ನು ಅತಿಕಡಿಮೆ ಪ್ರಮಾಣದಲ್ಲಿ ಖರೀದಿ ಮಾಡುತ್ತಿದ್ದಾರೆ ಮತ್ತು ಉತ್ತರದ ರಾಜ್ಯಗಳಲ್ಲಿ ಹೆಚ್ಚಿಗೆ ಖರೀದಿ ಮಾಡುತ್ತಿದ್ದಾರೆ. ಅಲ್ಲಿ ಖರೀದಿ ಮಾಡಿಬಿಟ್ಟನಂತರ ದಕ್ಷಿಣದ ರಾಜ್ಯಗಳಿಗೆ ಬರುತ್ತಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ತೊಂದರೆಯನ್ನು ಹೋಗಲಾಡಿಸುವ ಸಲುವಾಗಿ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಎರಡನೆಯದಾಗಿ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಅತಿಹೆಚ್ಚಿಗೆ ಹತ್ತಿ ಮೂರು ಲಕ್ಷ ಕ್ವಿಂಟಾಲ್ ಹತ್ತಿ ಬೈಲಹೊಂಗಲಕ್ಕೆ ಬಂದಿದೆ. ಮೂರು ಲಕ್ಷಿ ಕ್ವಿಂಟಾಲ್ ಹತ್ತಿ ಸವದತ್ತಿಗೆ ಬಂದಿದೆ. ಆದರೆ ಕೇವಲ 4 ಪರ್ಸೆಂಟ್‌ನಷ್ಟು ಮಾತ್ರ ಹತ್ತಿಯನ್ನು ಸವದತ್ತಿಯಲ್ಲಿ ತೆಗೆದುಕೊಂಡಿದ್ದಾರೆ. 10 ಪರ್ಸೆಂಟ್ ಹತ್ತಿಯನ್ನು ಬೈಲಹೊಂಗಲದಲ್ಲಿ ತೆಗೆದುಕೊಂಡಿದ್ದಾರೆ. ಅವರು ಅತಿ ಕಡಿಮೆ ಹತ್ತಿಯನ್ನು ತೆಗೆದುಕೊಳ್ಳುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಇದರ ಸಲುವಾಗಿ ಸರ್ಕಾರದವರು ಸಿ.ಸಿ.ಐ. ನವರು ಹೆಚ್ಚು ಪ್ರಮಾಣದಲ್ಲಿ ಹತ್ತಿಯನ್ನು ತೆಗೆದುಕೊಳ್ಳುವ ಸಲುವಾಗಿ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ರಾಮಲಿಂಗಾರೆಡ್ಡಿ : ಹೋದವರ್ಷ 1993-94ರಲ್ಲಿ ಹತ್ತಿಗೆ 1150 ರೂಪಾಯಿ ಬೆಂಬಲ ಬೆಲೆ ಇತ್ತು. ಆದರೆ ಹೋದವರ್ಷ ಹತ್ತಿ ಬೆಲೆ 2500 ರೂಪಾಯಿವರೆಗೆ ಇತ್ತು. ಬೆಂಬಲ ಬೆಲೆಗಿಂತ ಕಡಿಮೆ ಇದ್ದರೆ ಮಾತ್ರ ನಾವು ಸಿ.ಸಿ.ಐ. ನವರನ್ನು ಒತ್ತಾಯ ಮಾಡುವುದಕ್ಕೆ ಕಾರಣವಿರುತ್ತದೆ. ಆದರೆ ಬೆಂಬಲ ಬೆಲೆಗಿಂತ ಹೋದವರ್ಷ ಬೆಲೆ ಕಡಿಮೆ ಬರಲೇ ಇಲ್ಲ. ಆದ್ದರಿಂದ ಹೋದವರ್ಷ ನಾವು ಒತ್ತಾಯ ಮಾಡಲಿಲ್ಲ. ಈ ವರ್ಷ ಏನಾದರೂ ಬೆಲೆ ಕಡಿಮೆ ಇದ್ದರೆ ನಾವು ಸಿ.ಸಿ.ಐ ಅವರನ್ನು ಒತ್ತಾಯ ಮಾಡೋಣ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸಿ.ಸಿ.ಐ. ನವರು ಮಾರ್ಕೆಟ್‌ನಲ್ಲಿದ್ದರೆ ಬೆಲೆ ಹೆಚ್ಚಾಗುತ್ತದೆ. ಬೆಂಬಲ ಬೆಲೆಗಿಂತ ಕಡಿಮೆ ಆಗಬಾರದು ಎನ್ನುವ ಸಲುವಾಗಿಯೇ

ಅವರು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿರುವುದು. ಇಲ್ಲದಿದ್ದರೆ 1900 ಅಥವಾ 2000 ರೂಪಾಯಿ ಬೆಂಬಲ ಬೆಲೆ ಫಿಕ್ಸ್ ಮಾಡುತ್ತಾರೆ ಮತ್ತು ನಾಲ್ಕು ಕ್ವಿಂಟಾಲ್ ಮಾತ್ರ ಒಂದು ರೇಟ್ ಹಾಕಿ ತೆಗೆದುಕೊಳ್ಳುತ್ತಾರೆ. ಮುಂದೆ ಉಳಿದಿದ್ದನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಇವತ್ತು ಮೂರು-ನಾಲ್ಕು ಸಾವಿರ ರೂಪಾಯಿ ಬೆಲೆಬಾಳುವಂಥ ಹತ್ತಿ ಬೆಂಬಲ ಬೆಲೆಗಿಂತ ಜಾಸ್ತಿ ಹೋಗುವುದಿಲ್ಲ. ಆದಕಾರಣ ತಾವು ಕೊಟ್ಟಿರುವ ಉತ್ತರ ಸರಿಯಿಲ್ಲ. ನಮಗೆ ಬೆಂಬಲ ಬೆಲೆಗಿಂತ ಜಾಸ್ತಿ ಬೇಡ. ಅದರ ಸಲುವಾಗಿ ಸಿ.ಸಿ.ಐ. ನವರು ತೆಗೆದುಕೊಳ್ಳುವುದಕ್ಕೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? 1993-94 ಮತ್ತು 1994-95ರಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಹತ್ತಿ ಬೆಳೆಯುತ್ತಾರೆ ಅದನ್ನು ಸಿ.ಸಿ.ಐ.ನವರು ತೆಗೆದುಕೊಳ್ಳುವುದಕ್ಕೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಜವಳಿ ಖಾತೆ ಮಂತ್ರಿಗಳು, ಕೃಷಿ ಮಂತ್ರಿಗಳು, ಕೇಂದ್ರ ಕೃಷಿ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದಾರೆಯೇ? ಅಥವಾ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಹೋದವರ್ಷ ಅಗ್ರಿಕಲ್ಚರ್ ಮಂತ್ರಿಗಳದ್ದು ಒಂದು ಮೀಟಿಂಗ್ ಆಗಿತ್ತು. ಆ ಮೀಟಿಂಗ್‌ನಲ್ಲಿ ಏನು ಆಯಿತು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಕೌಜಲಗಿಯವರು ಏನು ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ, ಅದು ಸ್ವಲ್ಪಮಟ್ಟಿಗೆ ಸತ್ಯಕ್ಕೆ ಸಮೀಪವಾಗಿದೆ. ಸಿ.ಸಿ.ಐ. ನವರು ಕರ್ನಾಟಕದಲ್ಲಿ ಹತ್ತಿಯನ್ನು ರೈತರಿಂದ ಖರೀದಿಸಿ ಮಾರಾಟ ಮಾಡತಕ್ಕಂಥ ಪ್ರಸಂಗ ಇರುತ್ತದೆ. ಆ ಸಂದರ್ಭದಲ್ಲಿ ಅವರು ಸರಿಯಾದ ವೇಳೆಗೆ ಮಾರುಕಟ್ಟೆಗೆ ಬರುವುದಿಲ್ಲ ಎನ್ನುವಂಥ ದೂರನ್ನು ಬಹಳ ದಿವಸಗಳಿಂದ ಕರ್ನಾಟಕ ರಾಜ್ಯದ ಅನೇಕ ಸಹಕಾರ ಸಂಘಗಳು, ರೈತರ ಸಿ.ಸಿ.ಐ. ನವರ ಮುಂದೆ ಸಲ್ಲಿಸಿ ಆಗಿದೆ. ಕಳೆದ ಎಂಟು ತಿಂಗಳು ಅಥವಾ ಅದಕ್ಕಿಂತ ಸ್ವಲ್ಪ ಮೊದಲು ಸನ್ಮಾನ್ಯ ಹುಚ್ಚಮಾಸ್ತಿಗೌಡರು ಕೃಷಿ ಸಚಿವರಾಗಿದ್ದಾಗ ಸಿ.ಸಿ.ಐ.ನ ಅಧ್ಯಕ್ಷರು ನಮ್ಮ ಕಾಟನ್ ಡೆವಲಪ್‌ಮೆಂಟ್ ಸಭೆಗೆ ಬಂದಿದ್ದರು. ಅವತ್ತು ಸಹಿತ ಹತ್ತಿ ಅಭಿವೃದ್ಧಿ ಸಮಿತಿ ಸಭೆಯೊಳಗೆ ನಮ್ಮ ಕರ್ನಾಟಕ ರಾಜ್ಯಕ್ಕೆ ಯಾವರೀತಿಯಾಗಿ ಸಿ.ಸಿ.ಐ. ನವರು ಅನ್ಯಾಯ ಮಾಡುತ್ತಿದ್ದಾರೆ, ಎಂಬುದನ್ನು ಸ್ಪಷ್ಟವಾಗಿ ಅವರ ಗಮನಕ್ಕೆ ತರಲಾಗಿದೆ. ಹೋದಸಲ ಸಿ.ಸಿ.ಐ. ಅವರನ್ನು ಸರ್ಕಾರ ಬೆನ್ನುಬೀಳತಕ್ಕಂಥ ಪ್ರಸಂಗ ಇರಲಿಲ್ಲ. ನಮ್ಮಲ್ಲಿ ಹತ್ತಿಗೆ ಸಾಕಷ್ಟು ಧಾರಣೆ ಇತ್ತು. ಹತ್ತಿಯ ಪೀಕ್ ಕೂಡ ಬಹಳ ಇರಲಿಲ್ಲ. ಆದರೆ ಬರುವ ವರ್ಷಗಳಲ್ಲಿ ನಾವು ಸರಿಯಾದ ವ್ಯವಸ್ಥೆ ಮಾಡುತ್ತೇವೆ. ಕರ್ನಾಟಕ ರೈತರಿಗೆ ಸಹಿತ ಸಿ.ಸಿ.ಐ. ನವರು ಸರಿಯಾದ ಬೆಲೆ ಕೊಡುತ್ತಾರೆ ಎನ್ನುವ ಭರವಸೆಯನ್ನು ಆ ಸಮಿತಿ ಸಭೆಯಲ್ಲಿ ಕೊಟ್ಟಿದ್ದಾರೆ. ಪ್ರಸಂಗ ಬಂದರೆ ನಮ್ಮ ಜವಳಿ ಇಲಾಖೆಯಾಗಲೀ, ಮಾರ್ಕೆಟಿಂಗ್ ಇಲಾಖೆಯಾಗಲೀ, ಅಥವಾ ಕೃಷಿ ಇಲಾಖೆಯೇ ಆಗಲಿ, ನಾವು ಮೂವರೂ ಜಂಟಿಯಾಗಿ ಸಿ.ಸಿ.ಐ. ಅವರ ಜೊತೆ ಮತ್ತೊಮ್ಮೆ ಚರ್ಚೆ ಮಾಡುತ್ತೇವೆ. ನಮಗೆ ಅವರಿಂದ ದೊರೆತ ಭರವಸೆ ಮೇಲೆ ವಿಶ್ವಾಸ ಇದೆ. ಇದರ ಜೊತೆಗೆ ಬೆಂಗಳೂರಿನಲ್ಲಿ ನಮ್ಮ ರೀಜಿನಲ್ ಮ್ಯಾನೇಜರ್ ಏನಿದ್ದಾರೆ, ಅವರು ಸಿ.ಸಿ.ಐ. ನವರು ತೆಗೆದುಕೊಳ್ಳಬೇಕೆಂದು ಆದೇಶವನ್ನು ಸಹಿತ ಕೊಟ್ಟಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಿನಿಮಮ್ ಸಿ.ಸಿ.ಐ. ನವರು ಎಷ್ಟು ಪರ್ಸೆಂಟ್ ತೆಗೆದುಕೊಳ್ಳಬೇಕು ಎಂಬುದು ನಮಗೆ ಬೇಕು. ಅವರ ಪ್ರಕಾರ ಉತ್ತರದ ರಾಜ್ಯಗಳಲ್ಲಿ ಹೆಚ್ಚು ಪರ್ಚೇಸ್ ಮಾಡುತ್ತಾರೆ. ಆದರೆ ಕರ್ನಾಟಕದಲ್ಲಿ 20 ಪರ್ಸೆಂಟ್ ಕೂಡ ಇಲ್ಲ.

ಆದ್ದರಿಂದ ಮಿನಿಮಮ್ ಎಷ್ಟು ತೆಗೆದುಕೊಳ್ಳುತ್ತಾರೆಂದು ಗ್ಯಾರಂಟಿಯನ್ನು ನೀವು ತೆಗೆದುಕೊಳ್ಳಬೇಕು. ಆದ್ದರಿಂದ ಮಿನಿಮಮ್ ಫಿಕ್ಸ್ ಮಾಡುವ ಸಲುವಾಗಿ ಕೃಷಿ

ಮಂತ್ರಿಗಳು ಮತ್ತು ತಾವು ಕುಳಿತುಕೊಂಡು ಹೋರಾಟ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಅವರು ಈಗ ಕರ್ನಾಟಕದಲ್ಲಿ ಪರ್ಚೇಸ್ ಮಾಡಿರುವುದು ಕೇವಲ 1 ಲಕ್ಷ 39 ಸಾವಿರ ಕ್ವಿಂಟಾಲ್ ಮಾತ್ರ. ನಾವು ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿ, ಕರ್ನಾಟಕದಲ್ಲಿ ಎಷ್ಟು ಹತ್ತಿ ಬೆಳೆಯುತ್ತಾರೆ, ಅದನ್ನು 20Ë30 ಪರ್ಸೆಂಟ್‌ಗಿಂತ ಹೆಚ್ಚು ಖರೀದಿ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ.

ಅಧ್ಯಕ್ಷರು : ಪ್ರಶ್ನೆ : 8(300) ಅನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಆದ್ದರಿಂದ ಅದನ್ನು ಹೆಲ್ಡ್‌ಓವರ್ ಮಾಡಿದ್ದೇವೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಒಂದು ತಿಂಗಳ ಹಿಂದೆ ಫ್ಲಡ್ ಬಗ್ಗೆ ಕೇಳಿರತಕ್ಕಂಥ ಪ್ರಶ್ನೆ. ಇದು ಅವರ ಇಲಾಖೆಗೆ ಸಂಬಂಧ ಇಲ್ಲವಾದರೆ ಒಂದು ತಿಂಗಳ ಕಾಲ ಏಕೆ ಇಟ್ಟುಕೊಂಡಿದ್ದರು? ಅದನ್ನು ಮೊದಲೇ ಸಂಬಂಧಪಟ್ಟ ಇಲಾಖೆಗೆ ಕಳಿಸಿಕೊಡಬೇಕಾಗಿತ್ತು. ಎಷ್ಟೊಂದು ಬೇಜವಾಬ್ದಾರಿತನದಿಂದ ಈ ಇಲಾಖೆ ಕೆಲಸ ಮಾಡುತ್ತಿದೆ ಎಂದು ಇದರಿಂದ ಗೊತ್ತಾಗುತ್ತದೆ.

ಅಧ್ಯಕ್ಷರು : ಪ್ರಶ್ನೆ : 9(184)ಕ್ಕೆ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಪರೂಪಕ್ಕೆ ಶಾಸನಸಭೆ ಸೇರುತ್ತದೆ. ಆಗಲೂ ಪ್ರಶ್ನೆ ಕೇಳುವ ಅವಕಾಶ ಇಲ್ಲವೆಂದರೆ ಹೇಗೆ ಸ್ವಾಮಿ?

ಕಡೂರು ತಾಲ್ಲೂಕಿನಲ್ಲಿ ತೆಂಗು ಬೆಳೆಯನ್ನು ರಕ್ಷಿಸುವುದು.

123 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಶೇಷವಾಗಿ ಕಡೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆಗೆ ಕಪ್ಪು ತಲೆ ಹುಳು ತಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ಕಡೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಪ್ಪು ತಲೆ ಹುಳುವಿನ ಭಾದೆ ಕಂಡುಬಂದಿದ್ದು ಈ ಕೀಟ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) 1994-95ನೇ ಸಾಲಿನಲ್ಲಿ ಕಪ್ಪುತಲೆ ಹುಳುವಿನ ಹತೋಟಿಗಾಗಿ 3.80 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಕಡೂರು ತಾಲ್ಲೂಕಿನಲ್ಲಿ ಸಮೀಕ್ಷೆ ನಡೆಸಿ, 74,142 ತೆಂಗಿನ ಗಿಡಗಳು ಈ ಕೀಟದ ಹಾವಳಿಗೆ ಒಳಗಾಗಿದೆಯೆಂದು ಗುರುತಿಸಲಾಗಿದೆ. ಇವುಗಳಲ್ಲಿ ತೀವ್ರವಾಗಿ ಹಾನಿಗೊಳಗಾದ 42,000 ತೆಂಗಿನ ಮರಗಳಿಗೆ ಮಾನೋಕ್ರೋಟೋಪಾಸ್ ಕೀಟನಾಶಕವನ್ನು ಬೇರಿನ ಮೂಲಕ ಚುಚ್ಚುಮದ್ದು ನೀಡಲಾಗಿದೆ. ಭಾಗಶಃ ಹಾನಿಗೊಳಗಾದ 3000 ತೆಂಗಿನ ಗಿಡಗಳಿಗೆ ಮೊನೋಕ್ರೊಟೋಪಾಸ್ ಕೀಟನಾಶಕವನ್ನು ಸಿಂಪರಣೆ ಮಾಡಲಾಗಿದೆ. ಈ ಹತೋಟಿ ಕಾರ್ಯವನ್ನು ಒಟ್ಟು 152 ರೈತರ ತೆಂಗಿನ ತೋಟದಲ್ಲಿ ಮಾಡಲಾಗಿದೆ.

ಇ) ಕಡೂರು ತಾಲ್ಲೂಕಿನಲ್ಲಿ ರಾಜ್ಯವಲಯ ಹಾಗೂ ಜಿಲ್ಲಾ ಪಂಚಾಯತ್ ಮತಿಯಿಂದ 2ಪ್ರಯೋಗ ಶಾಲೆಗಳನ್ನು ಪರೋಪಜೀವಿಗಳ ಉತ್ಪಾದನೆಗಾಗಿ ಸ್ಥಾಪಿಸಲಾಗಿದೆ.